ಯಳಂದೂರು ತಾಲೂಕಿನ ವ್ಯಾಪ್ತಿಗೊಳಪಡುವ ದಾರ್ಮಿಕ ಸಂಸ್ಥೆಗಳಿಗೆ ಮಂಜೂರಾದ ಅನುದಾನ ವಿವರ

ಕ್ರಮ ಸಂಖ್ಯೆ	ಧಾರ್ಮಿಕ ಸಂಸ್ಥೆಯ ಹೆಸರು	ಮಂಜೂರಾದ ಅನುದಾನ
1	2	3
1.	ಶ್ರೀ ಹಿಂಡಿಮಾರಮ್ಮ ದೇವಸ್ಥಾನ, ಅಗರ	20,000.00
2.	ಶ್ರೀ ರಾವಾಣೇಶ್ವರ ಸ್ವಾಮಿ ದೇವಸ್ಥಾನ, ಕಿನಕನಹಳ್ಳಿ	20,000.00
3.	ಶ್ರೀ ಮಂಟೇಸ್ವಾಮಿ, ಮದ್ದೂರು	20,000.00
4.	ಶ್ರೀ ಸಿದ್ದಾಪ್ಪಾಜಿ ದೇ:ಮದ್ದೂರು	25,000.00
5.	ಶ್ರೀ ಬಸವೇಶ್ವರ ದೇ: ಮಾಲಾರ ಪಾಳ್ಯ	25,000.00

ಹುಬ್ಬಳ್ಳಿ ತಹಶೀಲ್ದಾರರ ಕಾರ್ಯಾಲಯ ಬೇರ್ಪಡಿಸುವುದು

292 (2195) ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ತಾಲ್ಲೂಕಾ ಕಾರ್ಯಾಲಯದಲ್ಲಿ ಕೆಲಸದ ಒತ್ತಡ ಹೆಚ್ಚಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹುಬ್ಬಳ್ಳಿ ತಾಲ್ಲೂಕಾ ಕಾರ್ಯಾಲಯವನ್ನು ಬೇರ್ಪಡಿಸಿ 2 ತಹಸೀಲ್ದಾರರ ಕಾರ್ಯಾಲಯ ಮಾಡುವ ವಿಚಾರ ಸರ್ಕಾರದ ಗಮನದಲ್ಲಿಯೇ ;

ಇ) ತಹಸೀಲ್ದಾರರ ಕಾರ್ಯಾಲಯದಲ್ಲಿನ ಕೆಲಸದ ಒತ್ತಡ ಹಾಗೂ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ಹೋಗಲಾಡಿಸಲು ಸರ್ಕಾರ ತೀವ್ರವಾಗಿ ಕೈಗೊಂಡ ಕ್ರಮವೇನು;

ಈ) ಹುಬ್ಬಳ್ಳಿ ತಹಸೀಲ್ದಾರರ ಕಾರ್ಯಾಲಯ ಬೇರ್ಪಡಿಸಿ 2 ತಹಸೀಲ್ದಾರರನ್ನು ನೇಮಿಸಲಿಕ್ಕೆ ಸರ್ಕಾರ ಅಧಿಸೂಚನೆ ಹೊರಡಿಸಿದೆಯೇ; ಇಲ್ಲವಾದಲ್ಲಿ ಕಾರಣವೇನು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಬಂದಿದೆ

ಆ) ಹೌದು.

ಇ) ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಸರ್ಕಾರದ ಪರಿಶೀಲನೆಯಲ್ಲಿದೆ

ರಾಜ್ಯದಲ್ಲಿ ಅರಣ್ಯ ಪ್ರದೇಶ ಒತ್ತುವರಿ

293 (2430) ಶ್ರೀ ಸುರೇಶ್‌ಕುಮಾರ್ ಎಸ್.(ರಾಜಾಜಿನಗರ) ಮಾನ್ಯ ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಎಕರೆ ಅರಣ್ಯ ಪ್ರದೇಶ ಒತ್ತುವರಿಯಾಗಿದೆ: ಜಿಲ್ಲಾವಾರು ವಿವರ ನೀಡುವುದು?